**SC 70-24** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 01.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ P H T, ವಕೀಲರಿಂದಃ**

2. ನಾನು ಬಿ ಕಾಂ ವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ವ್ಯವಹಾರ ಮಾಡುತ್ತೇನೆ. ನಾನು ಕೇಸ ಹಾಕಲು ಹಾಗೂ ಮುಖ್ಯ ವಿಚಾರಣೆಗೆ ಮಾಹಿತಿ ನೀಡಿದ್ದೇನೆ. ದಾವಾ ಆಸ್ತಿಯ ನಂಃ 1529/3 ಬಿ. ಚಕ್ಕುಬಂದಿ ಹೇಳುತ್ತೇನೆ. ಪೂರ್ವಕ್ಕೆಃ ರಸ್ತೆ ಇದೆ. ಪಶ್ಚಿಮಕ್ಕೆಃ ರಸ್ತೆ, ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ರಸ್ತೆ. ನಾನು ಸದರಿ ದಾವಾ ಆಸ್ತಿಯ ಮಾಲಿಕ. ನಾನು ದಾವಾ ಆಸ್ತಿ ಮಾಲಿಕ ಅಂತಾ ತೋರಿಸಲು ದಾಖಲೆ ಇಲ್ಲ. ದಾವಾ ಆಸ್ತಿ ಮಾಲಿಕರು ಮಹಾನಗರ ಪಾಲಿಕೆ. ನಾನು ಖಾಯಂ ಲೀಜ ಹೋಲ್ಡರ ಅಂತಾ ತೋರಿಸಲು ದಾಖಲೆ ಹಾಜರಪಡಿಸಿದ್ದೇನೆ. ದಾವಾ ಆಸ್ತಿ ಖರೀದಿಯಾಗುವವರೆಗೂ ರೂ. 800/- ವಾರ್ಷಿಕದಂತೆ ನನ್ನ ಹಾಗೂ ಕಮೀಶನರವರ ನಡುವೆ ಕರಾರು ಆಗಿದೆ. ಸದರಿ ಕರಾರು ನೋಂದಣಿಯಾಗಿಲ್ಲ. ಸದರಿ ಕರಾರು ಪತ್ರ ಹಾಜರಪಡಿಸಿದ್ದೇನೆ. ನಾನು ನಿಪಿ.1 ಹಾಗೂ 2 ನ್ನು ಹಾಜರಪಡಿಸಿದ್ದೇನೆ. ನಾನು ಹಾಜರಪಡಿಸಿದ ದಾಖಲೆಗಳಲ್ಲಿ ಕರಾರು ಪತ್ರ ಇಲ್ಲ. ಅದನ್ನು ಹಾಜರಪಡಿಸಲು ತಕರಾರು ಇಲ್ಲ. ನಮ್ಮಲ್ಲಿ ಯಾವುದೇ ದಾಖಲೆ ಇಲ್ಲ, ಅದನ್ನು ಹಾಜರಪಡಿಸಲು ತೊಂದರೆ ಇಲ್ಲ ಅಂದರೆ ಸರಿಯಲ್ಲ. ನನ್ನ ಬಳಿ ದಾಖಲೆ ಇಲ್ಲ, ಆ ಕಾರಣದಿಂದ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ನಿಪಿ.1 ಹಾಗೂ 2 ನ್ನು ಮಹಾನಗರ ಪಾಲಿಕೆ ಜೊತೆಗೆ ಮೀಲಾಪಿಯಾಗಿ ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. 1980 ರಲ್ಲಿ ಮಹಾನಗರ ಪಾಲಿಕೆಯಿಂದ ಅನುಮತಿ ಪಡೆದು ಕಟ್ಟಡ ಕಟ್ಟಿದ್ದೇನೆ. ನಾನು ಅನುಮತಿ ಪತ್ರವನ್ನು ಹಾಜರಪಡಿಸಿದ್ದೇನೆ. ನಾನು ಅನುಮತಿ ಪತ್ರ ಹಾಜರಪಡಿಸಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. ಪ್ರತಿವಾದಿ ಸಾಮಗ್ರಿಗಳನ್ನು ಸಂಗ್ರಹ ಮಾಡಲು ತಿಂಗಳ ಭಾಡಿಗೆ 1000/- ರೂ. ದಾವಾ ಆಸ್ತಿ ಪಡೆದಿದ್ದಾನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿ ತಿಂಗಳ ಭಾಡಿಗೆದಾರ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿ ಜಾಗಾ ಖಾಲಿ ಮಾಡುತ್ತೇನೆ ಅಂತಾ ಹೇಳಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**SC 70-24** **PW : 1**

ಪ್ರತಿವಾದಿ ಮಹಾನಗರ ಪಾಲಿಕೆ ಕರ ತುಂಬುತ್ತೇನೆ ಅಂತಾ ಲಿಖಿತ ಕರಾರು ಆಗಿಲ್ಲ. ಹಾಗೂ ಭಾಡಿಗೆ ಪತ್ರವಾಗಿಲ್ಲ. ಪ್ರತಿವಾದಿ ಮಹಾನಗರ ಪಾಲಿಕೆ ಕರ ಕಟ್ಟುತ್ತೇನೆ ಅಂತಾ ಒಪ್ಪಿಕೊಂಡಿದ್ದಾನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

4. ಪ್ರತಿವಾದಿ ಏಪ್ರಿಲ್ -2020 ರಿಂದ ಮಾರ್ಚ -2023 ವರೆಗೆ ಒಟ್ಟು 36 ಸಾವಿರ ರೂ. ಭಾಡಿಗೆ ಕೊಡುವುದು ಬಾಕಿ ಇದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ.4 ಕ್ಕೆ ಪ್ರತಿವಾದಿ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಅದನ್ನು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿಪಿ.5 ರಲ್ಲಿ ಮಾಲಿಕರ ಹೆಸರು ಮುನ್ಸಿಪಲ್ ಖುಲ್ಲಾ ಜಾಗೆ ಅಂತಾ ಇದೆ ಅಂದರೆ ಸರಿ. ಅದರಲ್ಲಿ ಅನುಭೋಗದಾರನ ಹೆಸರು ಇಬ್ರಾಹಿಂಖಾನ ಉಸ್ಮಾನಖಾನ ಲೋಧಿ ಟಿ. ಜಾಫರಸಾಬ ಎನ್. ಧಾರವಾಡ ಅಂತಾ ಇದೆ. ಜಾಫರಸಾಬ ಎನ್. ಧಾರವಾಡ ಅಂತಾ ಈ ಕೇಸಿನ ಪ್ರತಿವಾದಿ. ನಾನು ಈ ಕೇಸಿನಲ್ಲಿ ದಾವಾ ಆಸ್ತಿಯ ಮಾಲಿಕರನ್ನು ಪಕ್ಷಗಾರರನ್ನು ಮಾಡಿಲ್ಲ. ಈಗ ಸಾಕ್ಷಿಗೆ ಒಂದು ದೃಢೀಕೃತ ಮುಟೇಶನ್ ಪ್ರತಿ ತೋರಿಸಲಾಗಿ ಅದು ದಾವಾ ಆಸ್ತಿಗೆ ಸಂಬಂಧಪಟ್ಟಿದ್ದು ಅಂತಾ ಹೇಳುತ್ತಾರೆ. ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ಅಲ್ಲಾಭಕ್ಷ ಖಾದರಖಾನ ಸೌದಾಗಾರ ಹೆಸರು ನಮೂದಾಗಿದೆ ಅಂದರೆ ಸರಿ. ನಿಡಿ.1 ರ ತರಹ ದಾಖಲೆ ನನ್ನ ಬಳಿ ಇಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.